O.S . No. 194 -2016 PW-1

ದಿನಾಂಕಃ 28-06-2024 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು .

**<u>ಪಾಟೀ ಸವಾಲು ಃ 5 ನೇ ಪ್ರತಿವಾದಿಯ ಪರವಾಗಿ ಶ್ರೀ. ವಿ.ಆರ್.ಎಚ್ ವಕೀಲರಿಂದಃ</u>**

1. ನಾನು ಕುಂಬಾರವಾಡದಲ್ಲಿಯೇ ಹುಟ್ಟಿ ಬೆಳೆದಿರುತ್ತೇನೆ. ನಾನು ಕ್ಷೌರಿಕ ವೃತ್ತಿಯನ್ನು ಮಾಡುತ್ತೇನೆ. ನನ್ನ ತಂದೆಯವರು ಸಹ ಕ್ಷೌರಿಕ ವೃತ್ತಿಯನ್ನೇ ಮಾಡುತ್ತಿದ್ದರು. ಕುಂಬಾರವಾಡದಲ್ಲಿ ನಮ್ಮ ಅಜ್ಜನ ಮನೆ ಇರುತ್ತದೆ. ಸದ್ರಿ ಮನೆ ಕುಂಬಾರವಾಡದ ಕಾಲೇಜಿನ ಬಳಿ ಇರುತ್ತದೆ. ನನ್ನ ತಂದೆ ಬಾಡಿಗೆ ಅಂಗಡಿಯಲ್ಲಿ ವೃತ್ತಿಯನ್ನು ಮಾಡುತ್ತಿದ್ದರು. ಸದ್ರಿ ಅಂಗಡಿ ಪಂಚಾಯತ ಮಳಿಗೆಯ ಬಳಿ ಇರುತ್ತದೆ.

2. 1980 ಕ್ಕಿಂತ ಮುಂಚಿನಿಂದಲೂ ಸಹ ನಮ್ಮ ತಂದೆಯವರು ಕ್ಷೌರಿಕ ವೃತ್ತಿಯನ್ನು ಮಾಡುತ್ತಿದ್ದಾರೆ. ಸದ್ರಿ ಮಳಿಗೆಯು ಗ್ರಾಮ ಪಂಚಾಯಿತಿಯಿಂದ ನನ್ನ ತಂದೆಗೆ ಹರಾಜಿನಲ್ಲಿ ಹಂಚಿಕೆ ಆಗಿರುತ್ತದೆ. ಅದಕ್ಕೆ ಸಂಬಂಧಿಸಿದ ದಾಖಲೆಗಳು ನಮ್ಮ ಬಳಿ ಇಲ್ಲಾ. ಪ್ರತಿ ತಿಂಗಳು ಸದ್ರಿ ಅಂಗಡಿಗೆ ನಾವು ಬಾಡಿಗೆಯನ್ನು ತುಂಬುತ್ತಿದ್ದೇವೆ. 1980 ಕ್ಕಿಂತ ಮುಂಚಿನಿಂದಲೂ ಸಹ ಸದ್ರಿ ಬಾಡಿಗೆ ಹಣವನ್ನು ತುಂಬುತ್ತಿದ್ದೇವೆ. ಅದಕ್ಕೆ ಸಂಬಂಧಿಸಿದ ರಶೀದಿಗಳನ್ನು ನನ್ನ ತಂದೆಯವರು ಪಡೆದುಕೊಂಡಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ಬಾಡಿಗೆ ರಶೀದಿಗಳನ್ನು ನಾನು ನೋಡಿಲ್ಲ. ಹರಾಜು ಪ್ರಕ್ರೀಯೆ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಂದೆಗೆ ಸದ್ರಿ ಅಂಗಡಿ ಹಂಚಿಕೆಯಾದ ಬಗ್ಗೆ ದಾಖಲೆಗಳನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಹಂಚಿಕೆ ಕಾಲದಲ್ಲಿ ನನ್ನ ತಂದೆಗೂ ಹಾಗೂ ಗ್ರಾಮ ಪಂಚಾಯತಿ ನಡುವೆ ಕರಾರು ಒಪ್ಪಂದ ಪತ್ರ ಆಗಿರುತ್ತದೆ ಎಂದು ನನ್ನ ತಂದೆ ನನಗೆ ತಿಳಿಸಿರುತ್ತಾರೆ. ಸದ್ರಿ ಕರಾರು ಪತ್ರವನ್ನು ಗ್ರಾಮ ಪಂಚಾಯಿತಿಯಿಂದ ಪಡೆದುಕೊಳ್ಳಲು ನಾನು ಯಾವುದೇ ಪ್ರಯತ್ನ ಮಾಡಿರುವುದಿಲ್ಲ. ಕರಾರು ಪತ್ರ

ಯಾವ ದಿನಾಂಕದಂದು ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದ್ರಿ ಅಂಗಡಿಯು ಎಷ್ಟು ಅವಧಿಯ ಕಾಲಕ್ಕೆ ಹಂಚಿಕೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಅಂಗಡಿಯ ವಿಸ್ತೀರ್ಣ ನನಗೆ ಗೊತ್ತಿಲ್ಲ. ಸದ್ರಿ ಅಂಗಡಿಗೆ ಠೇವಣಿ ಹಣವನ್ನು ಪಂಚಾಯಿತಿಯಲ್ಲಿ ಇರಿಸಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಸದ್ರಿ ಅಂಗಡಿಗೆ ವಿದ್ಯುತ ಸಂಪರ್ಕ ಹಾಗೂ ನೀರಿನ ಸಂಪರ್ಕ ಮುಂಚೆ ಇರಲಿಲ್ಲ, ಈಗ ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ತಂದೆ ವಿದ್ಯುತ ಹಾಗೂ ನೀರಿನ ಕರಗಳನ್ನು ತುಂಬುತ್ತಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಈಗ ಗೋವಾದಲ್ಲಿ ಕ್ಷೌರೀಕ ಕೆಲಸವನ್ನು ಮಾಡುತ್ತೇನೆ. ನನ್ನ ತಂದೆ ಬೇರೆ ಖಾಸಗಿ ಅಂಗಡಿಯಲ್ಲಿ ಬಾಡಿಗೆ ನಾತೆ ಕ್ಷೌರೀಕ ಕೆಲಸವನ್ನು ಮಾಡುತ್ತಿದ್ದಾರೆ. ಸದ್ರಿ ಅಂಗಡಿಯಲ್ಲಿ ಎಷ್ಟು ಕೆಲಸದಿಂದ ಕೆಲಸ ಮಾಡುತ್ತಿದ್ದರೆಂದು ನನಗೆ ಗೊತ್ತಿಲ್ಲ.

3. ಪಂಚಾಯಿತಿಯಿಂದ ಅಂಗಡಿಯು ನನ್ನ ತಂದೆಗೆ ಹಂಚಿಕೆಯಾದ ಬಳಿಕ ಪರತಿ ತಿಂಗಳು ಅವರು ಬಾಡಿಗೆಯನ್ನು ತುಂಬಬೇಕಾಗುತ್ತದೆ ಎಂದರೆ ಸರಿ. ನನ್ನ ತಂದೆಯು ಸರಿಯಾಗಿ ಬಾಡಿಗೆಯನ್ನು ತುಂಬದೇ ಇದ್ದುದ್ದರಿಂದ ಪಂಚಾಯಿತಿಯಿಂದ ನೋಟೀಸನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪಂಚಾಯಿತಿ ಅಡಿಯಲ್ಲಿ ಬರುವ ಅಂಗಡಿಗಳಿಗೆ ಸಂಬಂಧಿಸಿದಂತೆ ಪಂಚಾಯಿತಿಯಲ್ಲಿ ಸಭೆ ಮಾಡಿ ನಿರ್ಣಯವನ್ನು ತೆಗೆದುಕೊಳ್ಳಲಾಗುತ್ತದೆ ಎಂದರೆ ಸರಿ. ಹಂಚಿಕೆಯಾದ ಬಳಿಕ ಠೇವಣಿ ಹಣವನ್ನು ಸಹ ನನ್ನ ತಂದೆ ಇರಿಸಿರುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.**

ಮರು ವಿಚಾರಣೆ ಇಲ್ಲಾಃ

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ., ದಾಂಡೇಲಿ